

# ಲಘುಹಾಸ್ಯದ ಮೈದಾನದಲ್ಲಿ ಮಗು ಬಿಡಿಸುವ ರಂಗವಲ್ಲಿ

ಮನಸ್ಸು ಕೆಡಿಸುವ ಮಾದಕದ್ರವ್ಯಗಳು ಮುಗ್ಧ ಮಗುವಿನ ಕೈಗೆ ಸಿಕ್ಕು ಆಟದ ಮೈದಾನದ ಗುರುತಿನ ರೇಖೆಗಳಾಗುವ ಹಗುರ ಹಾಸ್ಯದ ಚಂದದ ಕಿರುಚಿತ್ರವಿದು.

■ ಗೌರಿ

ಡ್ರಗ್ಸ್ ಸ್ಮಗ್ಲಿಂಗ್‌ನಂಥ ಗಂಭೀರ, ಭೀಕರ ಅಥವಾ ದಾರುಣ ಆಗಬಹುದಾದ ಸಂಗತಿಯನ್ನು ನವಿರು ಹಾಸ್ಯದ ರೂಪದಲ್ಲಿ ಕಟ್ಟಿಕೊಡುವ ಕಿರುಚಿತ್ರ 'ನೆಫ್ತಾ ಫುಟ್‌ಬಾಲ್ ಕ್ಲಬ್'.

ಹದಿನೇಳು ನಿಮಿಷದ ಈ ಕಿರುಚಿತ್ರ ನಮ್ಮನ್ನು ಬಿದ್ದು ಬಿದ್ದು ನಗುವಂತೆ ಮಾಡುವುದಿಲ್ಲ. ಆದರೆ ತೆಳುವಾದ ನಗುವೊಂದನ್ನು ತುಟಿಯ ಮೇಲೆ ಮೂಡಿಸುತ್ತದೆ. ಹಾಗೆಯೇ ಆ ನಗೆಯ ಮೂಲಕವೇ ಮನದಲ್ಲಿ ನಿರಾಳಭಾವವನ್ನೂ ಮೂಡಿಸುತ್ತದೆ. ಅನಿರೀಕ್ಷಿತ, ಆಕಸ್ಮಿಕ, ಗೊಂದಲ, ಅಮಾಯಕತೆ ಎಲ್ಲವೂ ಸೇರಿ ಒಂದು ಘಟನೆಯಿಂದ ಇನ್ನೊಂದು ಘಟನೆಗೆ ಖೋ ಕೊಟ್ಟುಕೊಳ್ಳುತ್ತ ಮುಂದುವರಿಯುವ ನಿರೂಪಣೆ ಈ ಕಿರುಚಿತ್ರಕ್ಕಿದೆ.

ಬಯಲು ಗುಡ್ಡದ ಮೇಲೆ ಇಬ್ಬರು ವ್ಯಕ್ತಿಗಳು ಕಳೆದುಹೋದ ತಮ್ಮ ಹೇಸರಗತ್ತೆಯನ್ನು ಹುಡುಕುತ್ತಿದ್ದಾರೆ. ಅವರ ಮುಖದಲ್ಲಿ ಆತಂಕವಿದೆ. ನಿರೀಕ್ಷೆಯಿದೆ. ಅವರಲ್ಲಿ ಒಬ್ಬನಿಗೆ ಈ ಹುಡುಕಾಟದಲ್ಲಿ ಫುಟ್‌ಬಾಲ್ ಆಟವನ್ನು ಮಿಸ್ ಮಾಡಿಕೊಳ್ಳುತ್ತೇವೇನೋ ಎಂಬ ಆತಂಕ. ಈ ಇಬ್ಬರೂ ಒಂದು ಎಳೆಯಾದರೆ, ಫುಟ್‌ಬಾಲ್ ಪ್ರಿಯ ಪುಟಾಣಿಗಳಿಬ್ಬರು ಇನ್ನೊಂದು ಎಳೆ. ಹತ್ತು ಹನ್ನೆರಡು ವರ್ಷದ ಹುಡುಗನೊಬ್ಬ ಮೊಪೆಡ್ ಓಡಿಸಿಕೊಂಡು ಹೋಗುತ್ತಿದ್ದಾನೆ. ಅವನ ಹಿಂದೆ ಅವನ ಆರೇಳು ವರ್ಷದ ತಮ್ಮನೂ ಕೂತಿದ್ದಾನೆ. ಅವರ ಚರ್ಚೆಯಲ್ಲಿ ಬರಿಯ ಫುಟ್‌ಬಾಲ್ ಆಟದ ಕುರಿತ ಮಾತುಗಳೇ ಬರುತ್ತಿವೆ. ಅವರು ಫುಟ್‌ಬಾಲ್ ಆಡುವ ಮೈದಾನದ ಬಾರ್ಡರ್ ಗುರುತು ಸ್ಪಷ್ಟವಾಗಿ ಇರದಿದ್ದರಿಂದ ಜಗಳ ಆಗುತ್ತಿರುತ್ತದೆ.

ಈ ಕಥೆ ನಡೆಯುವ ಜಾಗ ಟ್ಯುನೇಶಿಯಾ ಮತ್ತು ಅಲ್ಗೇರಿಯಾಗಳ ಗಡಿಪ್ರದೇಶ. ಹೇಸರಗತ್ತೆ ಹುಡುಕುತ್ತಿರುವವರು ಅಲ್ಗೇರಿಯಾದಲ್ಲಿದ್ದಾರೆ. ಮೊಪೆಡ್‌ನಲ್ಲಿ ಹೋಗುತ್ತಿರುವ ಪುಟಾಣಿಗಳು ಟ್ಯೂನೇಶಿಯಾದಲ್ಲಿದ್ದಾರೆ. ತಮ್ಮನಿಗೆ ಮೂತ್ರ ವಿಸರ್ಜನೆಗೆ ಅವಸರವಾಗುತ್ತದೆ. ಅಣ್ಣ ಗಾಡಿ ನಿಲ್ಲಿಸುತ್ತಾನೆ. ತಮ್ಮ ಟ್ಯುನೇಶಿಯಾ ಗಡಿ ದಾಟಿ ಹೋಗುತ್ತಾನೆ. ಅಲ್ಗೇರಿಯಾದಲ್ಲಿ ಮೂತ್ರ ವಿಸರ್ಜಿಸುವ ಆಸೆ ಅವನಿಗೆ. ಹಾಗೆ ಹೋದ ಅವನಿಗೆ ಹೇಸರಗತ್ತೆ ಕಾಣುತ್ತದೆ. ಅದನ್ನು ಎಳೆದುಕೊಂಡು ಬರುತ್ತಾನೆ. ಅದರ ಬೆನ್ನಮೇಲೆ ಬಿಳಿ ಪುಡಿಯ (ಮಾದಕ ದ್ರವ್ಯಗಳು) ಪ್ಯಾಕೆಟ್‌ಗಳಿವೆ.



**ಹೆಸರು:** ನೆಫ್ತಾ ಫುಟ್‌ಬಾಲ್ ಕ್ಲಬ್ (ಫ್ರಾನ್ಸ್)
**ನಿರ್ದೇಶಕ:** ಯ್ವೆಸ್ ಪಿಯೆಟ್
**ನಿರ್ಮಾಣ:** ಡೇಮಿಯನ್ ಮೆಘೆರ್ಬಿ, ಜಸ್ಟಿನ್ ಪೆಕಬರ್ಟಿ
**ಛಾಯಾಗ್ರಹಣ:** ವೆಲೆಂಟೀನ್ ವಿಗ್ನೆಂಟ್
**ಎಡಿಟ್:** ಜೆರೊಮ್
**ತಾರಾಗಣ:** ಎಲ್ಯಾಯೆಫ್ ಧಾವೊಯಿ, ಮೊಹಮ್ಮದ್ ಅಲಿ ಆಯರಿ, ಲೈಸ್ ಸಲೀಮ್, ಹಿಚೆಮ್ ಮೆಸ್ಬಾ

ಹೇಸರಗತ್ತೆಯ ಬೆನ್ನ ಮೇಲೆ ಮಾದಕದ್ರವ್ಯಗಳನ್ನು ಗಡಿದಾಟಿಸುವ ಸ್ಮಗ್ಲರ್‌ಗಳ ಪ್ರಯತ್ನ ಸಣ್ಣ ಎಡವಟ್ಟಿನಿಂದ ದಿಕ್ಕುತಪ್ಪಿದೆ. ಅದು ಈ ಹುಡುಗರ ಕೈಗೆ ಸಿಕ್ಕಿದೆ. ಅಣ್ಣನಿಗೆ ಅದರಲ್ಲಿರುವುದು ಮಾದಕ ದ್ರವ್ಯಗಳು ಎಂದು ಗೊತ್ತಾಗುತ್ತದೆ. ಅದನ್ನು ಮಾರಿ ಹಣ ಮಾಡಿಕೊಳ್ಳುವ ಹುನ್ನಾರವನ್ನೂ ಮಾಡುತ್ತಾನೆ. ಆದರೆ ತಮ್ಮ ಇನ್ನೂ ಚಿಕ್ಕ ಹುಡುಗ. ಅವನ ಪಾಲಿಗೆ ಅದು ಬಟ್ಟೆ ತೊಳೆಯುವ ಡಿಟರ್ಜಂಟ್ ಪೌಡರ್. ಒಂದು ಸಣ್ಣ ಪ್ಯಾಕ್ ತೆಗೆದುಕೊಂಡು ಅಣ್ಣ ಪೇಟೆಗೆ ಹೋದಾಗ ತಮ್ಮ ಆ ಮಾದಕದ್ರವ್ಯದ ಬ್ಯಾಗ್ ಅನ್ನು ಫುಟ್‌ಬಾಲ್ ಮೈದಾನಕ್ಕೆ ಹೊತ್ತು ತರುತ್ತಾನೆ. ಹುಡುಗರೆಲ್ಲ ಸೇರಿಕೊಂಡು ಮೈದಾನದಲ್ಲಿ ಆಟದ ಅಂಗಳದ ನಿಯಮಾನುಸಾರ ಗೆರೆ ಎಳೆಯಲು ಆ ಪುಡಿಯನ್ನು ಬಳಸಿಕೊಳ್ಳುತ್ತಾರೆ.

ಲಕ್ಷಾಂತರ ರೂಪಾಯಿಯ ಮಾದಕದ್ರವ್ಯ ಆಟದ ಮೈದಾನದ ಗುರುತಿನ ಗೆರೆಯಾಗುವುದರೊಂದಿಗೆ ಈ ಕಿರುಚಿತ್ರ ಕೊನೆಗೊಳ್ಳುತ್ತದೆ. ಮನಸ್ಸು ಕೆಡಿಸುವ ಮಾದಕದ್ರವ್ಯ, ಮಗುಮನಸ್ಸಿಗೆ ಬರಿಯ ಬಿಳಿಯ ಪುಡಿಯಾಗುವುದರಲ್ಲಿಯೇ ಈ ಚಿತ್ರದ ಮೂಲಸತ್ವವಿದೆ. ಮಾದಕದ್ರವ್ಯವನ್ನು ಮನುಷ್ಯ ಮನುಷ್ಯರ ನಡುವಿನ, ದೇಶ ದೇಶಗಳ ನಡುವಿನ ದ್ವೇಷದ, ವಿನಾಶದ ಪುಡಿಯಾಗಿ ನೋಡಿದರೆ, ಈ ಕೊನೆಯ ಬಿಂಬ ಹಲವು ಬಗೆಯ ಅರ್ಥಗಳನ್ನು ಹೊಳೆಯಿಸುತ್ತದೆ. ಹಾಗೆಯೇ ತೆಳುವಾದ ನಗುವೊಂದನ್ನು ಮುಖದ ಮೇಲೆ ಹಾಗೆಯೇ ಉಳಿಸುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2Ndjhwp ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.